# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ನವದೆಹಲಿ: "ಕಾಳು ಮೆಣಸಿನ ರಾಣಿ" ಎಂದೇ ಪ್ರಸಿದ್ಧವಾಗಿರುವ ರಾಣಿ ಚೆನ್ನಭೈರಾದೇವಿ ಅವರ ಸ್ಮರಣಾರ್ಥ ಅಂಚೆ ಚೀಟಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಬಿಡುಗಡೆ ಮಾಡಿದರು.


ಸಂಪುಟ : 47 | ಸಂಚಿಕೆ : 08 | ಶ್ರಾವಣ–ಭಾದ್ರಪದ | ಕಲಿಯುಗಾಬ್ದ 5127 | 15–08–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ನಾಗರಿಕತೆಯ ಉಳಿವು-ಅಳಿವಿಗೆ ಜನಸಂಖ್ಯಾ ಸಮತೋಲನ ಅಗತ್ಯ

ಯಾವುದೇ ನಾಗರಿಕತೆಯ ಅಳಿವು–ಉಳಿವು ಎನ್ನುವುದು ಜನಸಂಖ್ಯೆಯ ಸಮತೋಲನದಲ್ಲಿಯೇ ನಿಂತಿದೆ. ನಾಗರಿಕತೆಯ ಉಳಿವಿಗಾಗಿ ಬೇಕಾದ ಕನಿಷ್ಠ ಜನಸಂಖ್ಯೆಯ ಪ್ರಮಾಣವನ್ನೂ ಗಮನದಲ್ಲಿಟ್ಟುಕೊಳ್ಳುವುದು ಸಾರ್ವಕಾಲಿಕ ಅನಿವಾರ್ಯವಾಗಿದೆ. ಯಾವುದೇ ದೇಶ, ಪ್ರದೇಶ, ಸಮುದಾಯದಲ್ಲಿರುವ ಒಬ್ಬ ಹೆಣ್ಣು ತನ್ನ ಜೀವಿತಾವಧಿಯಲ್ಲಿ ಎಷ್ಟು ಮಕ್ಕಳಿಗೆ ಜನ್ಮ ನೀಡುತ್ತಾಳೆ ಎನ್ನುವುದನ್ನು TFR ಎನ್ನಲಾಗುತ್ತದೆ. TFR 2.1 ಎಂದರೆ ಒಂದು ಹೆಣ್ಣು ಜೀವಿತಾವಧಿಯಲ್ಲಿ 2.1 (ಸರಾಸರಿ) ಮಕ್ಕಳಿಗೆ ಜನ್ಮ ನೀಡಿದರೆ ಮುಂದಿನ ತಲೆಮಾರುಗಳ ನಂತರವೂ ಆ ಸಮುದಾಯ, ನಾಗರಿಕತೆ ಜೀವಂತವಾಗಿರುತ್ತದೆ. ಇಲ್ಲದಿದ್ದರೆ ಅಳಿವಿನ ಅಂಚಿಗೆ ಸಾಗುತ್ತದೆ. ಇಲ್ಲಿವರೆಗೂ TFR 2.1 ಎನ್ನುವುದರ ಹಿಂದೆಯೇ ಜಗತ್ತಿನ ಅನೇಕ ದೇಶಗಳು, ನಾಗರಿಕರು ಓಡುತ್ತಿದ್ದವು. ಅದನ್ನು ತಲುಪುವುದೇ ಕಷ್ಟ ಎನ್ನಿಸುತ್ತಿತ್ತು. ಆದರೆ ಇತ್ತೀಚೆಗೆ ಪ್ರಕಟಗೊಂಡ ಸಂಶೋಧನಾ ವರದಿಯೊಂದು ಹೊಸ ವಿಚಾರವನ್ನು ಸಮಾಜದ ಮುಂದಿಟ್ಟಿದೆ.

**ಏನಿದು ಹೊಸ ಸಂಶೋಧನೆ?** 6 ಮಂದಿ ಸಂಶೋಧಕರ ತಂಡ ನಡೆಸಿದ 'Threshold fertility for the avoidance of extinction under critical conditions' ಎಂಬ ಸಂಶೋಧನಾ ವರದಿ ಇತ್ತೀಚೆಗೆ PLOS One ಅಂತಾರಾಷ್ಟ್ರೀಯ ಸಂಶೋಧನಾ ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. ಇದುವರೆಗೂ ವೈಶ್ವಿಕವಾಗಿ ಗುರುತಿಸಲಾಗಿದ್ದ ಒಟ್ಟು ಫಲವತ್ತತೆಯ ದರ (Total Fertility Rate) ಪ್ರತಿ ಮಹಿಳೆಗೆ 2.1 ಎಂದು ಅಂದಾಜಿಸಲಾಗಿತ್ತು. ಆದರೆ ಒಟ್ಟು ಫಲವತ್ತತೆಯ ದರ 2.7 ಇರಬೇಕೆಂದು ಸಂಶೋಧನೆ ತಿಳಿಸಿದೆ. ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ಬಹುತೇಕ ಎಲ್ಲಾ ದೇಶಗಳು ಹಿಂದಿನ ಟಿಎಫ್‌ಆರ್ ದರಕ್ಕೆ(2.1) ತಕ್ಕಂತೆ ಪ್ರತಿಸ್ಥಾಪನೆ ಫಲವತ್ತತೆಯ ಮಟ್ಟವನ್ನೇ (Replacement Level Fertility) ತಲುಪಲು ಹೆಣಗಾಡುತ್ತಿವೆ. ಇಂತಹ ಸಂದರ್ಭದಲ್ಲಿ TFR 2.7 ಎನ್ನುವುದು ಮನುಕುಲಕ್ಕೇ ಎಚ್ಚರಿಕೆ ಗಂಟೆಯಂತೆ ಕಾಣುತ್ತಿದೆ.

**ವೈಶ್ವಿಕ ಸವಾಲು:** ವಿಶ್ವದಾದ್ಯಂತ ಒಟ್ಟು ಫಲವತ್ತತೆಯ ಪ್ರಮಾಣದಲ್ಲಿ ಗಣನೀಯ ಕುಸಿತ ಆಗಿದೆ. ವಿಶ್ವದಲ್ಲಿ 1960ರಲ್ಲಿ 5.3 ಇದ್ದ ಟಿಎಫ್‌ಆರ್ 2023ರ ವೇಳೆಗೆ 2.3ಕ್ಕೆ ಇಳಿದಿತ್ತು. ಪ್ರಸ್ತುತ ಜಗತ್ತಿನ ಮೂರನೇ ಎರಡು ಭಾಗದ ಜನರು ಈ ರೀತಿ ಆರ್‌ಎಲ್‌ಎಫ್ ಮಟ್ಟಕ್ಕಿಂತ ಕಡಿಮೆ ಇರುವ ಭೂಭಾಗಗಳಲ್ಲೇ ನೆಲೆಸಿದ್ದಾರೆ. ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ಹಲವು ದೇಶಗಳಲ್ಲಿ ಈ ಸಮಸ್ಯೆ ಹೆಚ್ಚಿದೆ. ಎಲ್ಲಾ ಜಿ 7 ರಾಷ್ಟ್ರಗಳೂ (ಇಟಲಿ 1.29, ಜಪಾನ್ 1.30, ಕೆನಡಾ 1.47, ಜರ್ಮನಿ 1.53, ಯುಕೆ 1.57, ಅಮೆರಿಕ 1.66, ಫ್ರಾನ್ಸ್ 1,79) ಕಡಿಮೆ ರಿಪ್ಲೇಸ್ಮೆಂಟ್ ದರವನ್ನು ಹೊಂದಿವೆ.

**ಫಲಿಸಲಿಲ್ಲ ಸರ್ಕಾರಿ ಪ್ರೋತ್ಸಾಹ:** ಹೆಚ್ಚು ಮಕ್ಕಳನ್ನು ಹೊಂದುವುದಕ್ಕೆ ಸರ್ಕಾರಗಳ ಪ್ರೋತ್ಸಾಹದ ನಂತರವೂ ಟಿಎಫ್‌ಆರ್ ದರಕ್ಕೆ ಸಮತೋಲನವಾಗಿ ಆರ್‌ಎಲ್‌ಎಫ್ ಸುಧಾರಣೆ ಕಂಡಿಲ್ಲ ಎನ್ನುವುದು ಕಳವಳಕಾರಿ ಸಂಗತಿ. 1980ರಿಂದ ಯುರೋಪ್ ಹಾಗೂ ಏಷ್ಯಾದ ಕೆಲವು ಅಭಿವೃದ್ಧಿ ಹೊಂದಿದ ದೇಶಗಳ ಟಿಆರ್‌ಎಫ್, ಆರ್‌ಎಲ್‌ಎಫ್‌ಗಿಂತ ಕಡಿಮೆಯೇ ಇದೆ.

**ಹೆಚ್ಚಬೇಕು ಹೆಣ್ಣು ಮಕ್ಕಳ ಜನನ:** ಹೆಣ್ಣು ಮಗುವಿನ ಜನನ ಹೆಚ್ಚಾದರೆ, ಆ ಮಗು ಸಂತಾನೋತ್ಪತ್ತಿಯ ವಯಸ್ಸನ್ನು ತಲುಪುವ ಮತ್ತು ಮಕ್ಕಳನ್ನು ಪಡೆಯುವ ಸಾಧ್ಯತೆ ಸಹಜವಾಗಿ ಹೆಚ್ಚಾಗುತ್ತವೆ. ಇದು ಕಾಲಾಂತರದಲ್ಲಿ ನೈಸರ್ಗಿಕವಾಗಿ ಒಟ್ಟು ಫಲವತ್ತತೆಯ ಪ್ರಮಾಣ ದರಕ್ಕೆ ಸರಿಯಾಗಿ ಪ್ರತಿಸ್ಥಾಪನೆಯ ಫಲವತ್ತತೆಯ ಮಟ್ಟವನ್ನು ಸ್ಥಿರವಾಗಿಟ್ಟುಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ ಎಂದು ಸಂಶೋಧನೆ ತಿಳಿಸುತ್ತದೆ.

**ಅಳಿವಿನಂಚಿಗೆ ಸರಿಯಲಿದೆ ಸಾವಿರಾರು ಭಾಷೆಗಳು:** ಟಿಎಫ್‌ಆರ್ ದರವು ನಿಗದಿತ ಆರ್‌ಎಲ್‌ಎಫ್ ದರಕ್ಕಿಂತ ಕುಸಿತ ಕಂಡರೆ ಅದು ಭಾಷೆಯ ಮೇಲೂ ಪರಿಣಾಮ ಬೀರಲಿದ್ದು, ಇರುವ 6,700ಕ್ಕೂ ಹೆಚ್ಚು ಮಾತನಾಡುವ ಭಾಷೆಗಳಲ್ಲಿ ಶೇ.40ರಷ್ಟು ಭಾಷೆಗಳು ಮುಂದಿನ ನೂರು ವರ್ಷಗಳಲ್ಲಿ ನಶಿಸಿಹೋಗುತ್ತವೆ. ಭಾಷೆಗಳ ನಾಶವು



ಸಂಸ್ಕೃತಿ, ಕಲೆ, ಸಂಗೀತ ಮತ್ತು ಮೌಖಿಕ ಪರಂಪರೆಗಳ ಅವನತಿಗೂ ಕಾರಣವಾಗುತ್ತವೆ ಎನ್ನುವುದು ವರದಿಯಲ್ಲಿ ಉಲ್ಲೇಖಗೊಂಡಿದೆ.

ಭಾರತದಲ್ಲಿ 1950ರಲ್ಲಿ 6.18 ಇದ್ದ ಫಲವತ್ತತೆಯ ದರವು 2023ರ ಹೊತ್ತಿಗೆ 1.9ಕ್ಕೆ ಇಳಿದಿತ್ತು. 2050ರಲ್ಲಿ 1.29 ಮತ್ತು 2100ರ ಹೊತ್ತಿಗೆ 1.04ಕ್ಕೆ ತಲುಪುತ್ತವೆ ಎಂದು ಅಂಕಿಅಂಶಗಳು ಹೇಳುತ್ತವೆ. ಈ ಅಂಕಿಅಂಶಗಳಾಧಾರಿತವಾಗಿ ಭಾರತದ ಭವಿಷ್ಯವನ್ನು ನಾವು ಗುರುತಿಸುವುದಾದರೆ ಸಂಶೋಧನೆ ತಿಳಿಸಿದ ಎಲ್ಲಾ ಸಮಸ್ಯೆಗಳೂ ಭಾರತದಲ್ಲಿ ಅತ್ಯಂತ ಆಘಾತಕಾರಿ ಪರಿಣಾಮ ಬೀರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

**ಭಾರತದಲ್ಲಿ ಒಟ್ಟು ಫಲವತ್ತತೆಯ ಕುರಿತಾದ ಚರ್ಚೆಯಲ್ಲಿ ಪ್ರಮುಖವಾಗಿ ಎರಡು ಹೇಳಿಕೆಗಳನ್ನು ಗಮನಿಸಬಹುದು.**

1. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ ಭಾಗವತ್ ಅವರು, "ಕುಸಿಯುತ್ತಿರುವ ಜನಸಂಖ್ಯೆಯು ಗಂಭೀರ ಕಳವಳಕಾರಿ ಸಂಗತಿ. ಒಂದು ಸಮಾಜದ ಒಟ್ಟು ಫಲವತ್ತತೆ ದರವು 2.1ಕ್ಕಿಂತ ಕಡಿಮೆಯಾದಾಗ, ಅದು ಅಳಿವಿನಂಚಿನಲ್ಲಿರುವ ಅಪಾಯವಿದೆ ಎಂದು ಜನಸಂಖ್ಯಾ ವಿಜ್ಞಾನವು ಸೂಚಿಸುತ್ತದೆ. ಇದರಿಂದಾಗಿ ಸಮಾಜದ ಕುಸಿತಕ್ಕೆ ಬಾಹ್ಯ ಸವಾಲುಗಳು ಬೇಕಾಗಿಲ್ಲ; ತನ್ನದೇ ಕಾರಣಕ್ಕೆ ಕುಸಿಯುತ್ತದೆ. ಆದ್ದರಿಂದ, 2.1ಕ್ಕಿಂತ ಹೆಚ್ಚಿನ ಫಲವತ್ತತೆ ದರವನ್ನು ನಮ್ಮ ಸಮಾಜ ಕಾಯ್ದುಕೊಳ್ಳುವುದು ಅತ್ಯಗತ್ಯ. ಹಾಗಾಗಿ ಪ್ರತಿ ದಂಪತಿ ಕನಿಷ್ಠ ಮೂರು ಮಕ್ಕಳನ್ನು ಹೊಂದಬೇಕು" ಎಂದು ಹೇಳಿದ್ದರು.

ಆರೆಸ್ಸೆಸ್ ಸರಸಂಘಚಾಲಕರ ಹೇಳಿಕೆಯಂತೆಯೇ 2025ರ ಜನವರಿಯಲ್ಲಿ ಉತ್ತರಪ್ರದೇಶದ ಕುಂಭಮೇಳದಲ್ಲಿ ನಡೆದ ವಿಶ್ವ ಹಿಂದು ಪರಿಷದ್‌ನ ಕೇಂದ್ರೀಯ ಮಾರ್ಗದರ್ಶಕ ಮಂಡಲ ಸಭೆ, ಅನೇಕ ಮಠಾಧೀಶರುಗಳು, ಜಗದ್ಗುರುಗಳು, ಸಾಧು ಸಂತರೂ ಈ ನೆಲೆಗಟ್ಟಿನಲ್ಲೇ ಹೇಳಿಕೆಗಳನ್ನು ನೀಡಿದ್ದಾರೆ.

2. ಮೂರು ಮಕ್ಕಳನ್ನು ಪ್ರೋತ್ಸಾಹಿಸಿ ಆಂಧ್ರಪ್ರದೇಶವು ಎರಡಕ್ಕಿಂತ ಹೆಚ್ಚು ಮಕ್ಕಳಿದ್ದವರು ಗ್ರಾಮ ಪಂಚಾಯತ್, ಮಂಡಲ ಪ್ರಜಾ ಪರಿಷತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಭಾಗವಹಿಸುವಂತಿಲ್ಲ ಎಂಬ 1994ರ ನಿಯಮವನ್ನು ತಿದ್ದುಪಡಿ ಮಾಡಿದೆ. ತೆಲಂಗಾಣವೂ 2018ರ ತನ್ನ ಪಂಚಾಯತ್ ರಾಜ್ ಕಾಯಿದೆಯ ನಿಯಮಗಳನ್ನು ತಿದ್ದುಪಡಿ ಮಾಡಿದೆ. ತಮಿಳುನಾಡಿನಲ್ಲೂ ಜನಸಂಖ್ಯಾ ಆಧಾರಿತ ಲೋಕಸಭಾ ಕ್ಷೇತ್ರ ಪುನರ್‌ವಿಂಗಡಣೆ (ಡಿ–ಲಿಮಿಟೇಷನ್) ಕಾರಣವನ್ನು ನೀಡಿ ರಾಜ್ಯದ ಜನರು ಮೂರು ಮಕ್ಕಳನ್ನು ಹೊಂದಬೇಕು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಕರೆ ನೀಡಿದ್ದಾರೆ.

ಈ ಮೇಲಿನ ಎರಡೂ ಹೇಳಿಕೆಗಳಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರ ಮತ್ತು ಇತರೆ ಸಾಧು ಸಂತರ ಹೇಳಿಕೆಗಳು ಸಹಸ್ರಾರು ವರ್ಷಗಳಿಂದ ಜಗತ್ತಿನ ಕಲ್ಯಾಣಕ್ಕಾಗಿಯೇ ಶ್ರಮಿಸುತ್ತಿರುವ ನಾಗರಿಕತೆಯ ಉಳಿವಿನ ದೃಷ್ಟಿಯಿಂದ ಹೇಳಿರುವುದಾದರೆ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ಅನೇಕ ರಾಜಕೀಯ ನಾಯಕರು ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಲ್ಲಿ ತಮ್ಮ ಸ್ಥಾನಮಾನ ಮತ್ತು ಕ್ಷೇತ್ರವಾರು ವಿಂಗಡಣೆಯಾದಾಗ ಯಾವುದೋ ಕೆಲವು ಕ್ಷೇತ್ರಗಳು ಧರ್ಮ, ಮತ, ಜಾತಿ ಪ್ರಾಬಲ್ಯದ ಆಧಾರದ ಮೇಲೆ ರಚನೆಯಾಗದಂತೆ ಎಚ್ಚರಿಕೆಯನ್ನು ವಹಿಸುತ್ತಿದ್ದಾರೆ. ಒಟ್ಟಿನಲ್ಲಿ ಜನಸಂಖ್ಯೆ ಹೆಚ್ಚಾಗಬೇಕು ಎನ್ನುವುದು ಇಂದಿನ ಏಕಕಂಠವಾಗುತ್ತಿದೆ.

### ಟಿಎಫ್‌ಆರ್ ಕುಸಿಯಲು ಕಾರಣಗಳು

**ಆರ್ಥಿಕ ಕಾರಣ:** ಇಂದಿನ ದಿನಮಾನಗಳಲ್ಲಿ ಹೆಚ್ಚಿರುವ ವಿದ್ಯಾಭ್ಯಾಸದ ಖರ್ಚಿನ ಕಾರಣಕ್ಕಾಗಿ ತಮ್ಮ ಇತರ ಜವಾಬ್ದಾರಿಗಳನ್ನು ನಿಭಾಯಿಸುವ ಸಲುವಾಗಿ ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವ ಯೋಜನೆಯನ್ನೇ ಕೈಬಿಡುತ್ತಾರೆ. ಒಂದು ವೇಳೆ ಇಬ್ಬರು ಅಥವಾ ಹೆಚ್ಚು ಮಕ್ಕಳನ್ನು ಹೊಂದುವ ಇಚ್ಛೆ ಇದ್ದರೂ ಆಕಸ್ಮಿಕವಾಗಿ ಬಂದೆರಗುವ ಸಾಲಬಾಧೆ, ಮನೆಮಂದಿಯ ಅನಾರೋಗ್ಯ ಸಮಸ್ಯೆ, ಉದ್ಯೋಗದಲ್ಲಿ ಅಸ್ಥಿರತೆ, ಹೆಚ್ಚುತ್ತಿರುವ ಜೀವನ ವೆಚ್ಚ ಇಡೀ ಮನೆಯ ಆರ್ಥಿಕ ಶಿಸ್ತನ್ನೇ ಕದಡಿಬಿಡುತ್ತವೆ.

**ವಿಭಕ್ತ ಕುಟುಂಬಗಳು:** ಇಂದು ವೈಯಕ್ತಿಕ ಕಾರಣಗಳಿಗೋ ಅಥವಾ ಅನಿವಾರ್ಯ ಕಾರಣಗಳಿಗೋ ಮದುವೆಯಾದ ನವದಂಪತಿಯು ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸುವುದು ರೂಢಿಯಾಗುತ್ತಿದೆ. ವಿಭಕ್ತ ಕುಟುಂಬಗಳಲ್ಲಿ ಹೆತ್ತ ಒಂದು ಮಗುವನ್ನೇ ಸಂಭಾಳಿಸುವುದು ಕಷ್ಟ. ಹಾಗಿರುವಾಗ ಮೂವರು ಮಕ್ಕಳನ್ನು ನೋಡಿಕೊಳ್ಳುವುದು ತೀರ ಅಸಂಭವ ಎನ್ನುವ ಭಾವನೆಯಿದೆ. ಕುಟುಂಬ ಕೇವಲ ಭಾವನೆಗಳಾಧಾರಿತವಾದದ್ದಲ್ಲ, ಕೌಟುಂಬಿಕ ಆರ್ಥಿಕತೆಯನ್ನು ಸಮರ್ಥವಾಗಿಟ್ಟುಕೊಳ್ಳಲು ಸಹಕಾರಿ ಎನ್ನುವುದು ಇನ್ನೂ ಮನವರಿಕೆಯಾಗಿಲ್ಲ.

**ಹೆಣ್ಣು ಭ್ರೂಣ ಹತ್ಯೆ:** ಹೆಣ್ಣು ಭ್ರೂಣ ಹತ್ಯೆ ಎನ್ನುವುದು ಹಿಂದಿಗಿಂತ ಸಾಕಷ್ಟು ಕಡಿಮೆಯಾಗಿದೆ. ಆದರೂ ಭ್ರೂಣಹತ್ಯೆಗೆ ಸಂಪೂರ್ಣ ಕಡಿವಾಣ ಬಿದ್ದಿಲ್ಲ. ಟಿಎಫ್‌ಆರ್ ಎನ್ನುವುದು ನೇರವಾಗಿ ಮಹಿಳೆಗೇ ಸಂಬಂಧಿಸಿದ ವಿಚಾರವಾದ್ದರಿಂದ, ಹೆಣ್ಣು ಭ್ರೂಣ ಹತ್ಯೆಯು ಕೇವಲ ಒಂದು ಹೆಣ್ಣು ಮಗುವಿನ ಹತ್ಯೆಯಲ್ಲದೆ, ಇಡೀ ಮನುಕುಲದ ಅಳಿವಿಗೇ ಪ್ರಮುಖ ಕಾರಣವಾಗುತ್ತಿದೆ.

**'ವೋಕಿಸಂ' ಪ್ರಭಾವ:** ಪಾಶ್ಚಾತ್ಯರ ಅನುಸರಣೆಯ ಪ್ರಭಾವದಿಂದಾಗಿ ಮದುವೆಯ ಕುರಿತು ನಿರಾಸಕ್ತಿ, 'ಮೈ ಬಾಡಿ, ಮೈ ಚಾಯ್ಸ್', 'ವಿವಾಹ ಒಂದು ಕಾಂಟ್ರಾಕ್ಟ್, ಕಮಿಟ್ಮೆಂಟ್', 'ತಡವಾಗಿ ಮದುವೆ ಆಗುವುದೂ ಒಂದು ಟ್ರೆಂಡ್' ಎಂಬಂತಹ ಮನೋಭಾವ ಮೂಡಿದೆ. ವಿವಾಹವಾಗದಿದ್ದರೂ ತಮ್ಮ ಏಕಾಂಗಿತನವನ್ನು ಮರೆಯಲು ಹಾಗೂ ದೈಹಿಕ ತೃಷೆಯನ್ನು ತೀರಿಸಿಕೊಳ್ಳಲು ಈ ನೆಲದ ಸಂಸ್ಕೃತಿಗೆ ವಿರುದ್ಧವಾದ 'ಲಿವಿಂಗ್ ಟುಗೆದರ್', 'ಫ್ರೆಂಡ್ಸ್ ವಿಥ್ ಬೆನಿಫಿಟ್ಸ್', 'ಒನ್ ನೈಟ್ ಸ್ಟ್ಯಾಂಡ್', ಮುಂತಾದ ಆಧುನಿಕ ಸಂಬಂಧಗಳ ಮೊರೆ ಹೋಗುತ್ತಿದ್ದಾರೆ. ಇವುಗಳ್ಯಾವುದೂ ಮಕ್ಕಳನ್ನು ಹೊಂದುವ ಉದ್ದೇಶವನ್ನು ಒಳಗೊಂಡಿಲ್ಲ ಎನ್ನುವುದು ಜನಸಂಖ್ಯೆಯ ಮುಂದುವರಿಕೆಗೆ ತೊಡಕಾಗಿವೆ.

**ಪರಿಹಾರವೇನು?** ವಯಸ್ಸಾದವರ ಮತ್ತು ಕುಸಿಯುತ್ತಿರುವ ಕಾರ್ಮಿಕಶಕ್ತಿಯನ್ನೂ ಒಳಗೊಂಡು ಸರ್ವರನ್ನೂ ಬೆಂಬಲಿಸುವ ಆರ್ಥಿಕ ಬೆಳವಣಿಗೆಗೆ ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವ ನೀತಿಗಳ ಮೇಲೆ ಭಾರತ ಗಮನ ಹರಿಸಬೇಕು. ಪ್ರತಿ ಕುಟುಂಬಕ್ಕೂ ಅಧಿಕವಾಗಿ ಆರ್ಥಿಕ ಹೊರೆಯಾಗುವುದು ಆರೋಗ್ಯ ಮತ್ತು ಮಕ್ಕಳ ಶಿಕ್ಷಣ. ಆದ್ದರಿಂದ ಈ ಎರಡು ಕ್ಷೇತ್ರಗಳಲ್ಲಿ ಕುಟುಂಬಕ್ಕೆ ಪೂರಕವಾದ ಸರ್ಕಾರದ ನೀತಿ–ನಿಯಮಗಳು ರೂಪುಗೊಳ್ಳಬೇಕು. ಆರ್‌ಎಲ್‌ಎಫ್‌ಗೆ ತಕ್ಕಂತೆ ಟಿಎಫ್‌ಆರ್ ಅನ್ನು ಸಮತೋಲನಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳಾಗಬೇಕು. ಎಲ್ಲದಕ್ಕಿಂತ ಮಿಗಿಲಾಗಿ ಜನಮಾನಸದ ಮಾನಸಿಕತೆ ಮೂರು ಮಕ್ಕಳನ್ನು ಹೊಂದುವುದಕ್ಕೆ ಸಿದ್ಧವಾಗಬೇಕು. ಅದಕ್ಕೆ ಪೂರಕವಾದ ವ್ಯವಸ್ಥೆ ರೂಪುಗೊಳ್ಳಬೇಕು. ಜನಸಂಖ್ಯೆ ವಿಪರೀತವಾದರೆ ಸೀಮಿತ ಸಂಪನ್ಮೂಲಗಳ ಹಂಚಿಕೆ ಹೇಗೆ? ಪ್ರಕೃತಿಯ ಶೋಷಣೆ ಆಗುವುದಿಲ್ಲವೇ? ಇಂತಹ ಪ್ರಶ್ನೆಗಳಿಗೂ ಉತ್ತರ ಕಂಡುಕೊಳ್ಳಬೇಕಾಗುತ್ತದೆ.

## ಸಂಸ್ಮರಣೆ

# ಡಿ. ದೇವರಾಜ ಅರಸ್ (ಆಗಸ್ಟ್ 20, 1915 - ಜೂನ್ 6, 1982)



ಹಿಂದುಳಿದ ವರ್ಗಗಳ ಹರಿಕಾರ ಎಂದೇ ಖ್ಯಾತರಾಗಿರುವ ಡಿ. ದೇವರಾಜ ಅರಸ್ ಅವರು ಜನನಾಯಕರಾಗಿ, ಬಡವರ ಧ್ವನಿಯಾಗಿ, ಸಮಾಜ ಸೇವಕರಾಗಿ ಪ್ರಸಿದ್ಧರಾದವರು. ಇವರು ರಾಜಕೀಯ ಕ್ಷೇತ್ರದಲ್ಲಿ ಅಪಾರವಾದ ಕೊಡುಗೆ ನೀಡಿದ್ದಾರೆ. ಡಿ.ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಿದವರು. ಎರಡು ಬಾರಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು.

**ಪರಿಚಯ:** ಡಿ. ದೇವರಾಜ ಅರಸ್ ಅವರು ಆಗಸ್ಟ್ 20, 1915 ರಂದು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ದೇವರಾಜ ಅರಸ್ ಮತ್ತು ತಾಯಿ ದೇವೀರ ಅಮ್ಮಣ್ಣಿ. ದೇವರಾಜ ಅರಸ್ ಅವರ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಮೈಸೂರಿನ ಉರ್ಸ್ ಬೋರ್ಡಿಂಗ್ ಶಾಲೆಯಲ್ಲಿ ಪಡೆದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಅಧ್ಯಯನ ಮಾಡಿದರು. ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಕಲ್ಲಹಳ್ಳಿಗೆ ಹಿಂದಿರುಗಿದ ಅರಸ್ ಕೃಷಿಯಲ್ಲಿ ತೊಡಗಿದರು. ಆದರೆ ಸ್ವಭಾವತಃ ನಾಯಕತ್ವದ ಗುಣವನ್ನು ಹೊಂದಿದ್ದ ಅರಸ್ ನಂತರದ ದಿನಗಳಲ್ಲಿ ರಾಜಕೀಯಕ್ಕೆ ಪಾದರ್ಪಣೆ ಮಾಡಿದರು.


**ರಾಜಕೀಯ ಜೀವನ:** ದೇವರಾಜ ಅರಸ್ ಅವರು 1952 ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ದೇಶದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ರಾಜಕೀಯ ಪ್ರವೇಶಿಸಿದರು. ಈ ಸಮಯದಲ್ಲಿ, ಮಹಾರಾಜರು ಇನ್ನೂ ಮೈಸೂರಿನಲ್ಲಿ ರಾಜ್ಯದ ಮುಖ್ಯಸ್ಥರಾಗಿದ್ದರು. ನಂತರ ಸತತ ಹತ್ತು ವರ್ಷ ಶಾಸಕರಾಗಿ ಆಯ್ಕೆಯಾಗಿದ್ದ ಅರಸ್ ಮಾರ್ಚ್ 20, 1972 – ಡಿಸೆಂಬರ್ 31, 1977 ಹಾಗೂ ಫೆಬ್ರವರಿ 28, 1978 – ಜನವರಿ 7, 1980 ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು.

**ಸಾಮಾಜಿಕ ಸುಧಾರಣೆ:** ದೇವರಾಜ ಅರಸು ಸಮಾಜ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಇವರಿಗೆ ದೇಶದಲ್ಲಿ ಬಡತನ ನಿರ್ಮೂಲನೆ ಮಾಡುವುದು ಮೊದಲ ಗುರಿಯಾಗಿತ್ತು. ರಾಜ್ಯದಲ್ಲಿ ಸುಧಾರಣೆ ತರಲು ಶೈಕ್ಷಣಿಕ ಹಾಗೂ ತಂತ್ರಜ್ಞಾನ ಹೊಂದಿದ ಮಂತ್ರಿಮಂಡಲವನ್ನು ರಚಿಸಿದರು. "ಉಳುವವನಿಗೆ ಭೂಮಿ" ಅವರ ಮತ್ತೊಂದು ಮಹತ್ತರವಾದ ಯೋಜನೆಯನ್ನು ಜಾರಿಗೆ ತಂದಿದ್ದರು. 1973ರಲ್ಲಿ ಮೈಸೂರನ್ನು 'ಕರ್ನಾಟಕ' ಎಂದು ನಾಮಕರಣ ಮಾಡಿದರು. ಅವರ ಕಾಲದಲ್ಲಿ 16,000 ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಒದಗಿಸಲಾಯಿತು. ಇವರ ಯೋಜನೆಗಳಿಂದಾಗಿ ಕೂಲಿ ಮಾಡುವವರು ಭೂ–ಮಾಲೀಕರಾದರು, ಬಡವರು–ಶ್ರೀಮಂತರ ನಡುವಿನ ಅಂತರ ಕಡಿಮೆಯಾಯಿತು. ಇದ್ದರಿಂದ ದೇಶದಲ್ಲಿ ಸಾಮಾಜಿಕ ಅಸಮಾನತೆಯನ್ನು ಕಡಿಮೆಗೊಲಿಸಲಾಯಿತು. ರಾಜ್ಯದಲ್ಲಿ ಅಭಿವೃದ್ಧಿಯ ಹೊಸ ಶಖೆಗೆ ಕಾರಣರಾಗಿದ್ದರು. ಪ್ರತಿ ಮನೆಯಲ್ಲೂ ವಿದ್ಯುತ್ ಬಲ್ಬ್ ಹೊಂದುವ ಯೋಜನೆಯನ್ನು ಜಾರಿಗೆ ತಂದವರು. ಎಲೆಕ್ಟ್ರಾನಿಕ್ ಸಿಟಿಯನ್ನು ಅಭಿವೃದ್ಧಿಪಡಿಸಲು ದೇವರಾಜ ಅರಸ್ ಅವರು ಬೆಂಬಲ ಸೂಚಿಸಿದರು. 1976ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಈ ಆರಂಭಿಕ ಬೀಜ ಹೂಡಿಕೆಯು ಎಲೆಕ್ಟ್ರಾನಿಕ್ಸ್ ಸಿಟಿಗೆ ಅಡಿಪಾಯ ಹಾಕಿತು. ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರಿಗೆ ಅನೇಕ ಸಹಾಯ ಮಾಡಿದ್ದರು. ಅವುಗಳಲ್ಲಿ ಒಂದಾದ ಕಾಳಿ ಯೋಜನೆಯು ಹಲವಾರು ವಲಯಗಳ ವಿರೋಧದ ನಡುವೆ ಕಾರ್ಯಗತಗೊಂಡಿತು. ಡಿ. ದೇವರಾಜ ಅರಸ್ ಅವರು ಜೂನ್ 6, 1982 ತಮ್ಮ 66 ವಯಸ್ಸಿನಲ್ಲಿ ನಿಧನರಾದರು.

## ಸಂಚಾರ

**ಲೇಖಕರು: ವೃಷಾಂಕ ಭಟ್**
**ಬೆಲೆ : ಕನ್ನಡ – ರೂ. 200**
**ಇಂಗ್ಲೀಷ್ – ರೂ. 299**

ಪುಸ್ತಕ ಪರಿಚಯ




'ಸಂಚಾರ – ಇದು ಒಳಗಿನ ಪಯಣ' ಪುಸ್ತಕವು ನಮ್ಮ ನಿಮ್ಮ ಜೀವನಗಳಲ್ಲಿ ದಿನನಿತ್ಯ ನಡೆಯುವ, ಆದರೆ ನಮ್ಮ ಗಮನಕ್ಕೆ ಬರದೆ ಮರೆಯಾಗುವ ಹತ್ತುಹಲವು ಕುತೂಹಲಕಾರಿ ಘಟನೆಗಳನ್ನು ಮುಂದಿಟ್ಟು ಜೀವನಪಾಠ ಕಲಿಸುವ ಸುಂದರ ಹೊತ್ತಗೆ. ಜೀವನಮೌಲ್ಯಗಳ ಪಾಠವನ್ನು ಹೀಗೂ ಮಾಡಬಹುದೆಂಬ ಅತ್ಯುತ್ತಮ ಮಾದರಿ; ಪಾಠಪುಸ್ತಕವಾಗಬೇಕಾದ ರಸಪೂರ್ಣ ಬದುಕಿನ ಬುತ್ತಿ. ಮುಖ್ಯವಾಗಿ ತ್ರಿಕರಣಗಳ ನಡುವೆ ಎಂಥವರಿಗೂ ಇದ್ದೇ ತೀರುವ ಅಂತರವನ್ನು ಹೇಗೆ ತಗ್ಗಿಸಿಕೊಳ್ಳಬೇಕೆಂಬುವುದನ್ನು 'ಸಂಚಾರ' ಕೃತಿಯಲ್ಲಿ ಕಾಣಬಹುದು. ಇಂಥ ಪ್ರಾಮಾಣಿಕ ಶೋಧನೆಯೇ ಈ ಬಗೆಯ ಸಂಚಾರದ ಗುರಿಯನ್ನು ದಿಟ್ಟವಾಗಿಸುತ್ತದೆ, ಗಟ್ಟಿಯಾಗಿಸುತ್ತದೆ. ಈ ಕೃತಿಯು 'Sanchara: A Philosophical Journey' ಶೀರ್ಷಿಕೆಯಲ್ಲಿ ಇಂಗ್ಲೀಷ್‌ನಲ್ಲೂ ಲಭ್ಯವಿದೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 7795827307, 6360581957

# ಆನಂದಧಾಮ ಎಂಬ ಅಕ್ಕರೆಯ ಮನೆ

ನಗುವಿನಿಂದ ಪುಟಿದೇಳುತ್ತಿರುವ ಸುಂದರ ನಿಷ್ಕಲ್ಮಶ ಮುಖಗಳು, ಅನುಭವದ ಪರಿಪೂರ್ಣತೆಯಿಂದ ಹೊಳೆಯುತ್ತಿರುವ ಕಣ್ಣುಗಳು. ಇಲ್ಲಿನ ನಿವಾಸಿಗಳ ಪರಿಚಯವನ್ನು ಮಾಡಿಕೊಡುತ್ತವೆ. ಜೀವನೋತ್ಸಾಹದಿಂದ ತುಂಬಿರುವ ಇವರನ್ನು ನೋಡಿದರೆ, ವರ್ಷಾನುಗಟ್ಟಲೆಯಿಂದ ಇವರ ಕುಟುಂಬದವರು ಇವರೊಂದಿಗಿಲ್ಲ ಎಂದು ಊಹಿಸಲೂ ಆಗದಷ್ಟು ಅಚ್ಚರಿಯ ವಾತಾವರಣ. ಇದು ಕಾಣಸಿಗುವುದು ಮಧ್ಯಪ್ರದೇಶದ ರಾಜಧಾನಿ ಭೋಪಾಲದ ಮಧ್ಯದಲ್ಲಿರುವ ಆನಂದಧಾಮ ಹಿರಿಯರ ಜನಸೇವಾ ಕೇಂದ್ರದಲ್ಲಿ.

ಮಧ್ಯಪ್ರದೇಶದ ಸೇವಾಭಾರತಿಯ ವತಿಯಿಂದ ನಡೆಸಲಾಗುತ್ತಿರುವ ಈ ಕೇಂದ್ರದಲ್ಲಿ ವಯೋವೃದ್ಧರು ಒಂದು ಕುಟುಂಬದವರಂತೆಯೇ ಆನಂದದಿಂದ ಇದ್ದಾರೆ. ಸಾಮಾಜಿಕ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಸೇವಾಭಾರತಿಯ ಅಂದಿನ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ದೂರದರ್ಶಿತ್ವದಿಂದ ಈ ಕಲ್ಪನೆಯನ್ನು ಹುಟ್ಟುಹಾಕಲಾಯಿತು. ತುಳಸೀ ರಾಮಾಯಣದಿಂದ ಸೌಖ್ಯಸುಧೆಯು ಹರಿಯುವಂತೆ, ಇಲ್ಲಿ ಶ್ರೀ ರಾಜೇಂದ್ರಪ್ರಸಾದ ಗುಪ್ತಾ ಪರಿವಾರದ ಸಾರಥ್ಯದಲ್ಲಿ ಹದಿನೈದು ವರ್ಷಗಳಿಂದ ಆನಂದದ ಹೊನಲು ಹರಿಯುತ್ತಿದೆ. ಬರಕತಉಲ್ಲಾ ವಿಶ್ವವಿದ್ಯಾಲಯದ ಡೆಪ್ಯುಟಿ ಡೈರೆಕ್ಟರ್ ಪದವಿಯಿಂದ ಸ್ವಯಂನಿವೃತ್ತರಾಗಿರುವ ಗುಪ್ತಾಜೀ ಸಭಾ ಕಾರ್ಯಕ್ರಮಗಳಲ್ಲಿ ತಮ್ಮ ಸ್ವರಚಿತ ಕವಿತೆಗಳನ್ನು ವಾಚಿಸಿ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾರೆ. ಆ ಪರಿಸರದಲ್ಲಿ ಬಡವರ ಮಕ್ಕಳಿಗಾಗಿ ಮೂರು ಹೊತ್ತು ನಡೆಯುವ ತರಬೇತಿ ಸಂಸ್ಥೆಯಲ್ಲಿ ಸಾವಿರದೈನೂರಕ್ಕೂ ಹೆಚ್ಚಿನ ಮಕ್ಕಳು ಅದರ ಲಾಭವನ್ನು ಪಡೆಯುತ್ತಿದ್ದಾರೆ.

2005ರ ಡಿಸೆಂಬರ್ 18ರಂದು ಈ ಕೇಂದ್ರದ ಸ್ಥಾಪನೆಯಾಯಿತು ಎಂದು ಸಂಸ್ಥೆಯ ಮುಖ್ಯಸ್ಥ ಶ್ರೀ ರವೀಂದ್ರ ಸುರಂಗೆ ಹೇಳುತ್ತಾರೆ. ಇಲ್ಲಿ 15 ಮಹಿಳೆಯರು ಮತ್ತು 13 ಪುರುಷರಿದ್ದಾರೆ. ಸಂಸ್ಥೆಯ ವತಿಯಿಂದ ಪರಿಸರದಲ್ಲಿ ಯೋಗ ಕೇಂದ್ರ, ಫಿಸಿಯೋಥೆರಪಿ, ನ್ಯೂರೋಥೆರಪಿ ಕೇಂದ್ರ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಹಾಗೂ ಉಚಿತ ಸಲಹಾ ಕೇಂದ್ರ, ಇವೆಲ್ಲವನ್ನೂ ನಡೆಸಲಾಗುತ್ತಿದೆ. ಇಲ್ಲಿ ಪ್ರತಿದಿನ ಬರುವ ಹೋಮಿಯೋಪತಿ ವೈದ್ಯರು ಆಶ್ರಮವಾಸಿಗಳನ್ನು ಪರೀಕ್ಷಿಸುವುದರ ಜೊತೆಜೊತೆಗೆ ಹೊರ ರೋಗಿಗಳನ್ನೂ ಪರೀಕ್ಷಿಸುತ್ತಾರೆ. ಇಲ್ಲಿನ ಹೊರರೋಗಿ ವಿಭಾಗದಲ್ಲಿ ಪ್ರತಿ ತಿಂಗಳೂ 500ಕ್ಕೂ ಹೆಚ್ಚಿನ ರೋಗಿಗಳು ಬಂದು ವೈದ್ಯಕೀಯ ಸೇವೆಯ ಉಪಯೋಗ ಪಡೆಯುತ್ತಾರೆ.



ಬೆಳಿಗ್ಗೆ ಯೋಗದಿಂದ ಹಿಡಿದು ಸಂಜೆಯ ಪೂಜೆಯವರೆಗೆ ಒಂದು ವ್ಯವಸ್ಥಿತ ರೀತಿಯ ದಿನಚರಿಯ ಜೊತೆಗೆ, ಇಲ್ಲಿನ ಆಶ್ರಮವಾಸಿಗಳಿಗೆ ಪ್ರತಿದಿನ 4ರಿಂದ 6ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಸಾಮಾಜಿಕ ಕಳಕಳಿ ಇರುವ ಸೇವಾ ಮನೋಭಾವದ ವ್ಯಕ್ತಿಗಳೂ ಇವರೊಂದಿಗೆ ಸಮಯವನ್ನು ಕಳೆಯುತ್ತಾರೆ. ಕೆಲವರಂತೂ ತಮ್ಮ ಮಕ್ಕಳ ಜನ್ಮದಿನವನ್ನೋ, ಅಥವಾ ಕೆಲ ದಂಪತಿಗಳು ತಮ್ಮ ವಿವಾಹ ವಾರ್ಷಿಕೋತ್ಸವವನ್ನೋ, ಈ ವೃದ್ಧರೊಂದಿಗೆ ಆಚರಿಸಿಕೊಳ್ಳುತ್ತಾರೆ.

ಆವರಣದಲ್ಲಿ ಮಹಿಳೆ ಹಾಗೂ ಪುರುಷರಿಗೆ ಪ್ರತ್ಯೇಕ ಕೊಠಡಿಗಳಿವೆ. ಜೊತೆಗೆ ಚಿಕಿತ್ಸೆ, ಚಿಂತನೆ, ಸಾಂಸ್ಕೃತಿಕ ಕೊಠಡಿಗಳೂ, ಮಂದಿರ ಹಾಗೂ ಉದ್ಯಾನವನ ಮತ್ತು ಉಪಾಹಾರದ ಕೊಠಡಿಗಳಿದ್ದು, ಒಂದು ಪುಸ್ತಕಾಲಯವೂ ಇದೆ. ತುರ್ತು ಅವಶ್ಯಕತೆಗಳಿಗಾಗಿ ಇಲ್ಲಿ ಒಂದು ಆಂಬ್ಯುಲೆನ್ಸ್ ದಿನದ 24 ಗಂಟೆಗಳ ಕಾಲವೂ ಲಭ್ಯವಿರುತ್ತದೆ.

ಈ ಕೇಂದ್ರದ ಪ್ರಾರಂಭದಿಂದಲೂ ಜೊತೆಗಿರುವ ಮತ್ತು ಹಿಂದೆ ಕ್ಷೇತ್ರದ ಸೇವಾ ಪ್ರಮುಖರಾಗಿದ್ದ ಗೋರೆಲಾಲ್, "ಇಲ್ಲಿ ನಾವು 60 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟವರನ್ನೇ ಸೇರಿಸಿಕೊಳ್ಳುತ್ತೇವೆ. ಅವರ ಅರ್ಜಿ ತುಂಬಿಸುವಾಗ ನಾವು ಅವರ ಕೌಟುಂಬಿಕ ಹಿನ್ನೆಲೆಯನ್ನು, ಪ್ರಸ್ತುತ ಪರಿಸ್ಥಿತಿಯನ್ನೂ ವಿಚಾರಿಸುತ್ತೇವೆ. ನಮ್ಮೊಂದಿಗಿನ ಸಮಾಲೋಚನೆಯಿಂದ ಬಿಕ್ಕಟ್ಟು ದೂರವಾಗಿ ಅವರು ತಮ್ಮ ಮನೆಗೆ ಹಿಂತಿರುಗಲಿ ಎನ್ನುವುದು ನಮ್ಮ ಮೊದಲ ಅಪೇಕ್ಷೆಯಾಗಿರುತ್ತದೆ" ಎನ್ನುತ್ತಾರೆ. ಕೇಂದ್ರದಲ್ಲಿರುವವರನ್ನು ಅವರ ಕುಟುಂಬದ ಸದಸ್ಯರು ಬಂದು ಭೇಟಿ ಮಾಡಲು ಒಂದು ನಿಗದಿತ ಸಮಯವಿರುತ್ತದೆ. ಸೇವಾಭಾರತಿಯ ಪೂರ್ಣಾವಧಿ ಕಾರ್ಯಕರ್ತ ಶ್ರೀ ಕೈಲಾಶ್ ಕುಶಾವಹ್ ಅವರು.

"ಇಲ್ಲಿನ ಸಮಾಲೋಚನಾ ಸಮಿತಿಯ ಶ್ರಮದ ಫಲವಾಗಿ ಬಹಳಷ್ಟು ಜನ ತಂತಮ್ಮ ಮನೆಗಳಿಗೆ ಹಿಂತಿರುಗಿದ್ದಾರೆ" ಎನ್ನುತ್ತಾರೆ. ಸ್ವರ್ಗಸ್ಥರಾದ ಮುಕ್ತಾ ಸೆಹಗಲ್ ಅವರಿಗೆ ಯಾರೂ ಇರಲಿಲ್ಲ. ಅವರು ತಮ್ಮ ಮನೆಯಲ್ಲಿ ಬಿದ್ದು ಓಡಾಡಲು ಅಸಮರ್ಥರಾದಾಗ ಸೇವಾಭಾರತಿಯ ಕಾರ್ಯಕರ್ತರು ಅವರ ಚಿಕಿತ್ಸೆ ಹಾಗೂ ಸೇವೆಯನ್ನು ಅವರಿರುವಷ್ಟು ಕಾಲವೂ ನೋಡಿಕೊಂಡರು. ಮುಕ್ತಾಜೀ ಅವರು ತಾವು ದೇಹ ತ್ಯಜಿಸುವ ಮೊದಲು ಅರೇರಾ ಕಾಲೋನಿಯಲ್ಲಿರುವ ತಮ್ಮ ಮನೆಯನ್ನು ಬಡ ಹುಡುಗಿಯರ ವಿದ್ಯಾರ್ಥಿನಿ ನಿಲಯವನ್ನಾಗಿ ಮಾಡಬೇಕೆಂಬ ಇಚ್ಛೆಯಿಂದ ಸೇವಾಭಾರತಿಗೆ ದಾನ ನೀಡಿದರು" ಎಂದು ಹೃದಯ ತುಂಬಿದ ಮನದಿಂದ ನೆನಪಿಸಿಕೊಳ್ಳುತ್ತಾರೆ.

ಮುಕ್ತಾಜೀ ಅವರಂತೆಯೇ ಇಲ್ಲಿ ಅನೇಕ ವೃದ್ಧರ ಅಂತಿಮ ವಿಧಿವಿಧಾನಗಳು ಕುಟುಂಬದವರು ಅಪೇಕ್ಷಿಪಟ್ಟಂತೆ ನಡೆಯುತ್ತವೆ. ಇಲ್ಲಿರುವ ಎಲ್ಲರಿಗೂ ಆನಂದಧಾಮವೇ ತಮ್ಮ ಮನೆ ಎನ್ನುವ ಪ್ರೀತಿಯ ಅನುಭೂತಿಯಿದೆ." 15 ವರ್ಷಗಳಿಂದ ಈ ಧಾಮವು ಸರಕಾರದ ಯಾವುದೇ ಸಹಾಯವಿಲ್ಲದೆ, ಸಂಪೂರ್ಣವಾಗಿ ಸಮಾಜಮುಖಿ ಸನ್ಮನಸ್ಸಿನವರ ಬೆಂಬಲದಿಂದಲೇ ಸಮರ್ಥವಾಗಿ ಸಾಗುತ್ತಿದೆ" ಎಂದು ಸೇವಾಭಾರತಿಯ ಕ್ಷೇತ್ರ ಸಂಘಟಕರಾದ ಶ್ರೀ ರಾಮೇಂದ್ರಜೀ ಹೇಳುತ್ತಾರೆ.

ಸಂಪರ್ಕ – ಶ್ರೀ. ರಾಮೇಂದ್ರಜೀ: 9425116748

## ಎಲ್ಲಾ ಧಾರ್ಮಿಕ ಭಾವನೆಗಳನ್ನೂ ಗೌರವಿಸೋಣ

'ನಾವು ಯಾವುದೇ ಮತವನ್ನು ಸಹಿಸಿಕೊಳ್ಳುವುದಿಲ್ಲ, ಬದಲಾಗಿ ಒಪ್ಪಿಕೊಳ್ಳುತ್ತೇವೆ' ಎಂಬ ಸ್ವಾಮಿ ವಿವೇಕಾನಂದರ ಮಾತು ಭಾರತದ ಅಸ್ಮಿತೆಯನ್ನು ತಿಳಿಸುತ್ತದೆ. ಸಹಿಷ್ಣುತೆಯ ಪದದಲ್ಲೇ ಸಹಿಸಿಕೊಳ್ಳುವುದು ಎಂಬ ಅರ್ಥ ಬರುತ್ತದೆ. ಆದರೆ ಭಾರತದ ಗುಣಧರ್ಮ ಎಲ್ಲಾ ಧರ್ಮ–ಮತ–ಪಂಥಗಳನ್ನು ಒಪ್ಪಿಕೊಳ್ಳುತ್ತದೆ. ನಿಮ್ಮಲ್ಲಿನ ಸತ್ಯವನ್ನೂ ನಾವು ಗೌರವಿಸುತ್ತೇವೆ ಎಂದು ಹೇಳುತ್ತದೆ. ಆದರೆ ಇತ್ತೀಚೆಗಿನ ದಿನಗಳಲ್ಲಿ ಆಗಾಗ ನಾವು ಕೇಳುವ 'ಕೋಮುವಾದ', 'ಅಸಹಿಷ್ಣುತೆ', 'ಜಾತ್ಯತೀತ' ಇತ್ಯಾದಿ ಪದಗಳು ಸಮಾಜದಲ್ಲಿ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಈ ಗೊಂದಲಗಳಿಗೂ ಮೂಲ ಕಾರಣ 'ಶ್ರೇಷ್ಠತೆಯ ವ್ಯಸನ'. ನಮ್ಮದೇ ಶ್ರೇಷ್ಠ/ ನಮ್ಮದು ಮಾತ್ರ ಶ್ರೇಷ್ಠ ಎಂಬ ಭಾವ ಮೂಡಿದಾಗ ಈ ಅವಾಂತರಗಳಿಗೆ ಕಾರಣವಾಗುತ್ತದೆ. 'ಆನೋ ಭದ್ರಾಃ ಕೃತವೋ ಯಂತು ವಿಶ್ವತಃ' – ಜಗತ್ತಿನ ಮೂಲೆಮೂಲೆಗಳಿಂದ ಶ್ರೇಷ್ಠವಾದ ಸಂಗತಿಗಳು ನಮ್ಮೆಡೆಗೆ ಹರಿದು ಬರಲಿ ಎಂಬ ಶ್ರೇಷ್ಠ ಚಿಂತನೆಯ ನಾಡಿದು. ಅಂತಹ ನಾಡಿನ ಪ್ರಜೆಗಳಾದ ನಾವು ಎಲ್ಲಾ ಜಾತಿ, ಮತ, ಪಂಥ, ಸಂಪ್ರದಾಯ, ಉಪಾಸನಾ ಪದ್ಧತಿ, ಸಮುದಾಯಗಳ ಬಗ್ಗೆ ಸಮಾನ ಗೌರವವನ್ನು ನೀಡೋಣ.

ನಾಗರಿಕ ಶಿಷ್ಟಾಚಾರ

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಸುಬ್ರಾಯ ನಂದೋಡಿ

# ಸಾಲುದ್ದದ ಸುದ್ದಿಗಳು

## ಗಿನ್ನೆಸ್ ವಿಶ್ವ ದಾಖಲೆಯ ಪುಟ ಸೇರಿದ ಪ್ರಧಾನಿ ಮೋದಿಯ 'ಪರೀಕ್ಷಾ ಪೇ ಚರ್ಚಾ 2025'




ಪ್ರಧಾನಿ ನರೇಂದ್ರ ಮೋದಿಯವರು ವಿದ್ಯಾರ್ಥಿಗಳಿಗಾಗಿ ವಾರ್ಷಿಕವಾಗಿ ಆಯೋಜನೆಗೊಳಿಸುವ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮ ಗಿನ್ನೆಸ್ ವಿಶ್ವ ದಾಖಲೆಯ ಪುಟವನ್ನು ಸೇರಿದೆ. 3.53 ಕೋಟಿಗೂ ಹೆಚ್ಚು ನೋಂದಣಿಗಳು ಮತ್ತು 21 ಕೋಟಿಗೂ ಹೆಚ್ಚು ವೀಕ್ಷಕರೊಂದಿಗೆ ಪರೀಕ್ಷಾ ಪೆ ಚರ್ಚಾ 2025 ಗಿನ್ನೆಸ್ ವಿಶ್ವ ದಾಖಲೆಗೆ ಸೇರಿದೆ. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರೈಲ್ವೆ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಮತ್ತು ಜಿತಿನ್ ಪ್ರಸಾದ ಅವರು ಗಿನ್ನೆಸ್ ವಿಶ್ವ ದಾಖಲೆಯ ಪ್ರಮಾಣಪತ್ರವನ್ನು ಸ್ವೀಕರಿಸಿದರು. ಕಲಿಕೆಗೆ ಸಮಗ್ರ ಮತ್ತು ಸಂಭ್ರಮಾಚರಣೆಯ ವಿಧಾನವನ್ನು ಕಲ್ಪಿಸಿಕೊಂಡಿದ್ದಕ್ಕಾಗಿ, ಪರೀಕ್ಷೆಗೆ ಸಂಬಂಧಿಸಿದ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಯೋಗಕ್ಷೇಮ ಮತ್ತು ವೈಯಕ್ತಿಕ ಬೆಳವಣಿಗೆಯನ್ನು ಇದು ಪ್ರೋತ್ಸಾಹಿಸಿದೆ.

## ಮೊದಲ ಮೇಕ್ ಇನ್ ಇಂಡಿಯಾ ಗ್ರೀನ್ ಹೈಡ್ರೋಜನ್ ಪ್ಲಾಂಟ್ ಕಾರ್ಯಾರಂಭ

ಗುಜರಾತ್‌ನ ಕಾಂಡ್ಲಾದ ಬಂದರು ವಲಯದಲ್ಲಿ ಭಾರತವು ತನ್ನ ಮೊದಲ ಮೇಕ್-ಇನ್-ಇಂಡಿಯಾ ಗ್ರೀನ್ ಹೈಡ್ರೋಜನ್ ಪ್ಲಾಂಟ್ ಅನ್ನು ಕಾರ್ಯಾರಂಭ ಮಾಡುವ ಮೂಲಕ ಸುಸ್ಥಿರತೆಯತ್ತ ಒಂದು ಮಹತ್ವದ ಹೆಜ್ಜೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಉದ್ಘಾಟಿಸಿದ ಈ ಯೋಜನೆಯು ಹಸಿರು ಬಂದರು ಮೂಲಸೌಕರ್ಯದಲ್ಲಿ ಭಾರತದ ಪ್ರಗತಿಯನ್ನು ಎತ್ತಿ ತೋರಿಸುತ್ತದೆ. ಕೇವಲ ನಾಲ್ಕು ತಿಂಗಳಲ್ಲಿ ನಿರ್ಮಿಸಲಾದ ಈ ಪ್ಲಾಂಟ್, ಮೇ 2025ರಲ್ಲಿ ಪ್ರಧಾನಿ ಘೋಷಿಸಿದ 10 ಮೆಗಾವ್ಯಾಟ್ ಹಸಿರು ಹೈಡ್ರೋಜನ್ ಯೋಜನೆಯ ಮೊದಲ ಮಾಡ್ಯೂಲ್ ಆಗಿದೆ. ವಾರ್ಷಿಕ 140 ಮೆಟ್ರಿಕ್ ಟನ್ ಹಸಿರು ಹೈಡ್ರೋಜನ್ ಉತ್ಪಾದನಾ ಸಾಮರ್ಥ್ಯದೊಂದಿಗೆ, ಈ ಪ್ಲಾಂಟ್ ಭಾರತದ ನಿವ್ವಳ ಶೂನ್ಯ ಪ್ರಯಾಣದಲ್ಲಿ ಪ್ರಮುಖ ಮೈಲಿಗಲ್ಲು ಎಂದು




ಗುರುತಿಸುತ್ತದೆ. ದೀನದಯಾಳ್ ಬಂದರು ಮೆಗಾವ್ಯಾಟ್-ಪ್ರಮಾಣದ ಹಸಿರು ಹೈಡ್ರೋಜನ್ ಪ್ಲಾಂಟ್ ಅನ್ನು ಕಾರ್ಯಗತಗೊಳಿಸಿದ ಮೊದಲ ಭಾರತೀಯ ಬಂದರು ಇದಾಗಿದೆ.

## ಕಳೆದ 10 ವರ್ಷದಲ್ಲಿ ರೈಲು ಅಪಘಾತಗಳು ಶೇ.77ರಷ್ಟು ಇಳಿಕೆ

2014-15ಕ್ಕೆ ಹೋಲಿಸಿದರೆ ರೈಲು ಅಪಘಾತಗಳಲ್ಲಿ ಶೇ.77ರಷ್ಟು ಇಳಿಕೆ ಕಂಡುಬಂದಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ವೈಷ್ಣವ್, 2014-15ರಲ್ಲಿ ರೈಲು ಅಪಘಾತಗಳ ಸಂಖ್ಯೆ 135 ರಷ್ಟಿತ್ತು, ಅದು ಈಗ 2024-25ರಲ್ಲಿ 31ಕ್ಕೆ ಇಳಿದಿದೆ ಎಂದು ಹೇಳಿದರು. ದೇಶೀಯವಾಗಿ ಅಭಿವೃದ್ಧಿಪಡಿಸಿದ ಸ್ವಯಂಚಾಲಿತ ರೈಲು ರಕ್ಷಣಾ ವ್ಯವಸ್ಥೆಯಾದ KAVACH ನಂತಹ ಹೊಸ ತಂತ್ರಜ್ಞಾನವನ್ನು ಪರಿಚಯಿಸುವ ಮೂಲಕ ಸರ್ಕಾರವು ಪ್ರಯಾಣಿಕರು ಮತ್ತು ರೈಲ್ವೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದು ಅವರು ಹೇಳಿದರು.

## ಚೀನಾವನ್ನು ಹಿಂದಿಕ್ಕಿ ಅಮೆರಿಕಕ್ಕೆ ಸ್ಮಾರ್ಟ್‌ಫೋನ್ ರಫ್ತು ಮಾಡುವ ಅಗ್ರರಾಷ್ಟ್ರವಾದ ಭಾರತ

ಜೂನ್ 2025ರ ತ್ರೈಮಾಸಿಕದಲ್ಲಿ ಭಾರತವು ಮೊದಲ ಬಾರಿಗೆ ಚೀನಾವನ್ನು ಹಿಂದಿಕ್ಕಿ ಅಮೆರಿಕಕ್ಕೆ ಸ್ಮಾರ್ಟ್‌ಫೋನ್‌ಗಳ ಅಗ್ರ ರಫ್ತುದಾರನಾಗಿದೆ ಎಂದು ಸಂಶೋಧನಾ ಸಂಸ್ಥೆ ಕ್ಯಾನಲಿಸ್ ತಿಳಿಸಿದೆ. ಅಮೆರಿಕ-ಚೀನಾ ವ್ಯಾಪಾರ ಉದ್ವಿಗ್ನತೆ ಮತ್ತು ಸುಂಕ ಅನಿಶ್ಚಿತತೆಗಳ ನಡುವೆ ಆ್ಯಪಲ್ ಭಾರತದಲ್ಲಿ ಐಫೋನ್ ಉತ್ಪಾದನೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿರುವುದು ಈ ಬದಲಾವಣೆಗೆ ಪ್ರಮುಖ ಕಾರಣ. ಚೀನಾದಲ್ಲಿ ಜೋಡಿಸಲಾದ ಅಮೆರಿಕಕ್ಕೆ ಆಮದು ಮಾಡಿಕೊಳ್ಳಲಾದ ಸ್ಮಾರ್ಟ್‌ಫೋನ್‌ಗಳ ಪಾಲು ತೀವ್ರವಾಗಿ 25 ಪ್ರತಿಶತಕ್ಕೆ ಇಳಿದಿದೆ, ಇದು ಒಂದು ವರ್ಷದ ಹಿಂದೆ 61 ಪ್ರತಿಶತದಷ್ಟಿತ್ತು. ಆ ಪಾಲನ್ನು ಭಾರತ ವಶಪಡಿಸಿಕೊಂಡಿದೆ, ಅಮೆರಿಕಕ್ಕೆ ಭಾರತದಲ್ಲಿ ತಯಾರಿಸಿದ ಸ್ಮಾರ್ಟ್‌ಫೋನ್‌ಗಳ ಸಾಗಣೆ ವರ್ಷದಿಂದ ವರ್ಷಕ್ಕೆ 240 ಪ್ರತಿಶತದಷ್ಟು ಏರಿಕೆಯಾಗಿ ಮತ್ತು ಅಮೆರಿಕದ ಆಮದುಗಳಲ್ಲಿ 44 ಪ್ರತಿಶತದಷ್ಟಿದೆ.

## ಸೊಮಾಲಿಯಾಗೆ 10 ಟನ್ ಮಾನವೀಯ ನೆರವು ರವಾನಿಸಿದ ಭಾರತ



ಆಂತರಿಕ ಸಂಘರ್ಷ, ಹವಾಮಾನ ಆಘಾತಗಳು ಮತ್ತು ಆರ್ಥಿಕ ಸಂಕಷ್ಟಗಳ ನಡುವೆ ಹೆಚ್ಚುತ್ತಿರುವ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಆಫ್ರಿಕನ್ ರಾಷ್ಟ್ರವಾದ ಸೊಮಾಲಿಯಾಕ್ಕೆ ಅಂತರರಾಷ್ಟ್ರೀಯ ಒಗ್ಗಟ್ಟಿನ ಗಮನಾರ್ಹ ಸೂಚನೆಯಾಗಿ ಭಾರತವು 10 ಟನ್ ಮಾನವೀಯ ಸಹಾಯವನ್ನು ರವಾನಿಸಿದೆ. ವಿದೇಶಾಂಗ ಸಚಿವಾಲಯದ ಪ್ರಕಾರ, ಈ ರವಾನೆಯು ಅಗತ್ಯ ಔಷಧಗಳು, ಶಸ್ತ್ರಚಿಕಿತ್ಸಾ ವಸ್ತುಗಳು, ಆಸ್ಪತ್ರೆ ಅಗತ್ಯ ವಸ್ತುಗಳು ಮತ್ತು ಬಯೋಮೆಡಿಕಲ್ ಉಪಕರಣಗಳು ಸೇರಿದಂತೆ ವಿವಿಧ ನಿರ್ಣಾಯಕ ವೈದ್ಯಕೀಯ ಸರಬರಾಜುಗಳನ್ನು ಒಳಗೊಂಡಿದೆ. ಪ್ಯಾಕೇಜ್‌ಗಳಲ್ಲಿ ಭಾರತೀಯ ರಾಷ್ಟ್ರೀಯ ಧ್ವಜವನ್ನು ಪ್ರಮುಖವಾಗಿ ಗುರುತಿಸಲಾಗಿದೆ ಮತ್ತು "ಭಾರತದ ಜನರು ಮತ್ತು ಸರ್ಕಾರದಿಂದ ಉಡುಗೊರೆ" ಎಂದು ಲೇಬಲ್ ಮಾಡಲಾಗಿದೆ. ಯುರೋಪಿಯನ್ ಆಯೋಗದ ಪ್ರಕಾರ, ಸೊಮಾಲಿಯಾ ದಶಕಗಳಿಂದ ದೀರ್ಘಕಾಲದ ಸಂಘರ್ಷ ಮತ್ತು ತೀವ್ರ ಹವಾಮಾನ ಪರಿಸ್ಥಿತಿಗಳನ್ನು ಸಹಿಸಿಕೊಂಡಿದೆ. ಸತತ ಐದು ಮಳೆಗಾಲಗಳು ವಿಫಲವಾದ ಕಾರಣ 2020-2023ರ ಬರಗಾಲವು ದೇಶದ 90 ಪ್ರತಿಶತದಷ್ಟು ಪ್ರದೇಶದ ಮೇಲೆ ಪರಿಣಾಮ ಬೀರಿತು ಮತ್ತು 8 ಮಿಲಿಯನ್‌ಗಿಂತಲೂ ಹೆಚ್ಚು ಜನರ ಮೇಲೆ ಪರಿಣಾಮ ಬೀರಿತು. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ 2023ರ ಡೇರ್ ಮಳೆಗಾಲವು ಎಲ್ ನಿನೋ ಪರಿಣಾಮದಿಂದ ಉಲ್ಬಣಗೊಂಡಿತು, ಇದರ ಪರಿಣಾಮವಾಗಿ ಸರಾಸರಿಗಿಂತ ಹೆಚ್ಚಿನ ಮಳೆ ಮತ್ತು ಬೃಹತ್ ಪ್ರವಾಹ ಉಂಟಾಗಿ 2.5 ಮಿಲಿಯನ್ ಜನರ ಮೇಲೆ ಪರಿಣಾಮ ಬೀರಿತು, ಇದರಲ್ಲಿ 1.2 ಮಿಲಿಯನ್ ಜನರು ಬಲವಂತವಾಗಿ ಸ್ಥಳಾಂತರಗೊಂಡರು ಎಂದು ಆಯೋಗ ಹೇಳಿದೆ.

# ಪರಿಸರಸ್ನೇಹಿ ಈಜುಕೊಳಗಳಿಂದ ವರ್ಷಕ್ಕೆ 3 ಕೋಟಿ ರೂ. ಗಳಿಸುತ್ತಿರುವ ಕೊಯಮತ್ತೂರಿನ ಉದ್ಯಮಿ

ಪ್ರೇರಣಾ

ಕೊಯಮತ್ತೂರು ಬಳಿಯ ಹಳ್ಳಿಯಲ್ಲಿ ಬೆಳೆದ ವಿಕಾಶ್ ಕುಮಾರ್ ಅವರ ಬಾಲ್ಯದ ದಿನಗಳ ಈಜುವುದರ ನೆನಪುಗಳು ಡೈವಿಂಗ್ ಬೋರ್ಡ್‌ಗಳು, ಟೈಲ್ಸ್‌ಗಳನ್ನು ಹೊಂದಿರುವ ಅಲಂಕಾರಿಕ ಈಜುಕೊಳಗಳಲ್ಲಿರಲಿಲ್ಲ; ಅವು ಬಾಳೆ ಮರಗಳಿಂದ ಕೂಡಿದ್ದವು. ಶುದ್ಧ, ಶಾಂತಿಯುತ ಮತ್ತು ಮುಖ್ಯವಾಗಿ, ರಾಸಾಯನಿಕ ಮುಕ್ತವಾಗಿದ್ದವು. ವರ್ಷಗಳ ನಂತರ, ನಗರದಲ್ಲಿ ವಾಸಿಸುವ ಚಾರ್ಟರ್ಡ್ ಅಕೌಂಟೆಂಟ್ ಆಗಿ, ವಿಕಾಶ್ ತನ್ನ ಮಗನಿಗೆ ಅದೇ ಅನುಭವವನ್ನು ಮರುಸೃಷ್ಟಿಸಲು ಬಯಸಿದ್ದರು. ಆದರೆ ಆಧುನಿಕ ಸ್ವಿಮ್ಮಿಂಗ್ ಪೂಲ್‌ಗಳು ಅಡ್ಡಪರಿಣಾಮಗಳ ಕೂಪವಾಗಿದ್ದವು. ಅವುಗಳಲ್ಲಿ ಕ್ಲೋರಿನ್ ಇದ್ದು, ಅದು ಕೂದಲಿಗೆ ಹಾನಿ ಮಾಡುತ್ತದೆ, ಚರ್ಮವನ್ನು ಕೆರಳಿಸುತ್ತದೆ ಮತ್ತು ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತದೆ. ಆದ್ದರಿಂದ ಆಧುನಿಕ ಈಜುಕೊಳಕ್ಕೆ ಹೊಂದಿಕೊಳ್ಳುವ ಬದಲು, ವಿಕಾಶ್ ತಮಿಳುನಾಡಿನ ಪೊಲ್ಲಾಚಿಯಲ್ಲಿರುವ ತಮ್ಮ ತೋಟದ ಮನೆಯಲ್ಲಿ ಸಿಮೆಂಟ್, ಕ್ಲೋರಿನ್ ಅಥವಾ ಸಂಶ್ಲೇಷಿತ ವಸ್ತುಗಳನ್ನು ಬಳಸದೆ ತನ್ನದೇ ಆದ ನೈಸರ್ಗಿಕ, ಸ್ವಯಂ-ಶುದ್ಧೀಕರಣ ಈಜುಕೊಳವನ್ನು ನಿರ್ಮಿಸಿದರು.

ಒಬ್ಬ ತಂದೆಯಾಗಿ ತನ್ನ ಮಗನಿಗಾಗಿ ಮೂಡಿದ ಆಸೆಯೊಂದು ಅದೆಷ್ಟು ಬೇಗನೆ ವ್ಯವಹಾರದ ನೀಲನಕ್ಷೆಯಾಗಿ ಬದಲಾಯಿತು. ನೈಸರ್ಗಿಕ ಜಲಮೂಲಗಳನ್ನು ಅನುಕರಿಸುವ ಯುರೋಪ್‌ನಲ್ಲಿ ಜನಪ್ರಿಯವಾಗಿರುವ ಪರಿಸರ ಸ್ನೇಹಿ ಮಾದರಿಯಾದ ಜೈವಿಕ ಈಜುಕೊಳಗಳ ಬಗ್ಗೆ ವಿಕಾಶ್ ತಿಂಗಳುಗಟ್ಟಲೆ ಸಂಶೋಧನೆ ನಡೆಸಿದರು. 2030ರ ವೇಳೆಗೆ ಜಾಗತಿಕ ಬಯೋಪೂಲ್ ಮಾರುಕಟ್ಟೆ ಸುಮಾರು $4 ಬಿಲಿಯನ್ ತಲುಪುವ ನಿರೀಕ್ಷೆಯಿದೆ ಎಂದು ಅವರು ಕಂಡುಕೊಂಡರು. ಆಗ ಇದು ಕೇವಲ ತಂದೆಯಾಗಿ ಮೂಡಿದ ಆಸೆಯ ಯೋಜನೆ ಮಾತ್ರವಾಗದೆ, ಒಂದು ವೃತ್ತಿಯೂ ಆಗಬಹುದು





ಎಂದು ಅರಿತುಕೊಂಡರು.

ಸ್ವತಃ ಸಿಎ ಆಗಿರುವುದರಿಂದ ಅಥವಾ ಬಹುಶಃ ಸಿಎ ಆಗಿರುವುದರಿಂದಲೇ ವಿಕಾಶ್‌ಗೆ ಎದುರಾಗಬಲ್ಲ ಸವಾಲುಗಳ ಅರಿವಿದ್ದವು. ನೈಸರ್ಗಿಕ ಮತ್ತು ಆರ್ಥಿಕ ಎರಡೂ ಅಂಶಅಂಶಗಳ ಕುರಿತು ಅವರಿಗೆ ತಿಳುವಳಿಕೆ ಇತ್ತು. ಇವುಗಳ ಆಧಾರದ ಮೇಲೆ ಅವರು ಭಾರತೀಯ ಹವಾಮಾನ, ವಸ್ತುಗಳು ಮತ್ತು ಜೀವನಶೈಲಿಗೆ ಅನುಗುಣವಾಗಿ ಜೈವಿಕ ಈಜುಕೊಳಗಳನ್ನು ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು ಮೀಸಲಾಗಿರುವ ಬಯೋಸ್ಫಿಯರ್ ಎಂಬ ಕಂಪನಿಯನ್ನು ಪ್ರಾರಂಭಿಸಿದರು.

ಅವರ ಈಜುಕೊಳಗಳನ್ನು ಸಂಪೂರ್ಣವಾಗಿ ಕಚ್ಚಾ, ನೈಸರ್ಗಿಕ ಮತ್ತು ಸ್ಥಳೀಯ ವಸ್ತುಗಳಿಂದ ತಯಾರಿಸಲಾಗುತ್ತದೆ. ಕಡಿಮೆ ಶಕ್ತಿಯ ಪಂಪ್ 24/7 ಕೆಲಸ ಮಾಡುತ್ತದೆ, ಕೊಳದ ತುಂಬ ಹಾಸಲಾದ ಜಲ್ಲಿಕಲ್ಲುಗಳು, ಜಲಸಸ್ಯಗಳು ಮತ್ತು ಪ್ರಯೋಜನಕಾರಿ ಬ್ಯಾಕ್ಟೀರಿಯಾದ ಪದರಗಳ ಮೂಲಕ ನೀರನ್ನು ಶುದ್ಧವಾಗಿರಿಸುತ್ತದೆ. ಈ ಬ್ಯಾಕ್ಟೀರಿಯಾಗಳು ಮತ್ತು ಸಸ್ಯಗಳು ಪ್ರಕೃತಿಯ ಶೋಧಕಗಳಾಗಿ ಕಾರ್ಯನಿರ್ವಹಿಸುತ್ತವೆ, ಕಠಿಣ ರಾಸಾಯನಿಕಗಳು ಅಥವಾ ವಾರ್ಷಿಕ ನೀರಿನ ಬದಲಿ ಅಗತ್ಯವಿಲ್ಲದೆ ಮಾಲಿನ್ಯಕಾರಕಗಳನ್ನು ತೆಗೆದುಹಾಕುತ್ತವೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳುತ್ತವೆ.

ಇಂದು ಭಾರತದಾದ್ಯಂತ ಪರಿಸರ ಪ್ರಜ್ಞೆ ಹೊಂದಿರುವ ಮನೆಮಾಲೀಕರ, ರೆಸಾರ್ಟ್‌ಗಳ ಮತ್ತು ತೋಟದ ಮನೆಗಳನ್ನು ಪೂರೈಸುವ ಉದ್ಯಮವಾಗಿ ಬಯೋಸ್ಫಿಯರ್ ಬೆಳೆಯುತ್ತಿದೆ. ಪ್ರತಿಯೊಂದು ನೈಸರ್ಗಿಕ ಈಜುಕೊಳವನ್ನು ನಿರ್ಮಿಸಲು ಸುಮಾರು 45 ದಿನಗಳು ಬೇಕಾಗುತ್ತದೆ ಮತ್ತು ಕೋಯಿ ಕೊಳಗಳು, ಜಲಪಾತಗಳು ಮತ್ತು ಸುತ್ತುವರಿದ ನೈಸರ್ಗಿಕ ತೊರೆಗಳನ್ನು ಸೇರಿಸುವಂತೆಯೂ ಅಭಿವೃದ್ಧಿಗೊಳಿಸಬಹುದು.

> **ಜನರು ನನ್ನ ಬಳಿಗೆ ಬರುವುದು ಕೇವಲ ಈಜುಕೊಳಕ್ಕಾಗಿ ಅಲ್ಲ, ಅವರು ಕಳೆದುಹೋಗಿದೆ ಎಂದು ಭಾವಿಸಿದ ಪ್ರಕೃತಿಯ ಒಂದು ಭಾಗಕ್ಕಾಗಿ ಬರುತ್ತಾರೆ. – ವಿಕಾಶ್ ಕುಮಾರ್**

ಈಜುಕೊಳಗಳಿಗೆ ಯಾವುದೇ ನಿರ್ವಹಣೆ ಅಗತ್ಯವಿಲ್ಲ, ಕಾಂಕ್ರೀಟ್ ಅಥವಾ ಪ್ಲಾಸ್ಟಿಕ್ ಲೈನಿಂಗ್‌ಗಳನ್ನು ಬಳಸದೆ ಕೇವಲ ಸ್ಥಳೀಯ ಜೀವವೈವಿಧ್ಯತೆಯನ್ನು ಬೆಂಬಲಿಸುತ್ತವೆ. ವಿಕಾಶ್ ಅವರ ವಿಧಾನವು ಐಷಾರಾಮಿಯನ್ನು ಪುನರ್ವಿಮರ್ಶಿಸುವುದಲ್ಲದೆ, ವಿಶೇಷವಾಗಿ ಭಾರತದಂತಹ ನೀರಿನ ಕೊರತೆಯಿರುವ ದೇಶದಲ್ಲಿ ಸುಸ್ಥಿರತೆಯನ್ನು ಮರು ವ್ಯಾಖ್ಯಾನಿಸುತ್ತದೆ.

ಅವರ ಉದ್ಯಮವು ಈಗ ವಾರ್ಷಿಕವಾಗಿ 3 ಕೋಟಿ ರೂ.ಗಳಿಗಿಂತ ಹೆಚ್ಚು ಗಳಿಸುತ್ತದೆ. ಹೆಚ್ಚು ಮೌಲ್ಯಯುತವಾಗಿರುವುದು ಅವರ ಆದಾಯವಲ್ಲ; ಜನರು ಪ್ರಕೃತಿಯನ್ನು ಬಯಸಿ ಬರುವ ಭಾವ. ಹೆಚ್ಚಿನ ಭಾರತೀಯರು ಹಸಿರು ಪರ್ಯಾಯಗಳನ್ನು ಹುಡುಕುತ್ತಾ ನೈಸರ್ಗಿಕ ಪ್ರಪಂಚದೊಂದಿಗೆ ಮತ್ತೆ ಸಂಪರ್ಕ ಸಾಧಿಸುತ್ತಿದ್ದಂತೆ, ವಿಕಾಶ್ ಅವರ ಕಥೆಯು ಅತ್ಯುತ್ತಮ ನಾವೀನ್ಯತೆಗಳು ಹೆಚ್ಚಾಗಿ ಬಾಲ್ಯದ ಸರಳ ನೆನಪುಗಳಲ್ಲಿ ಬೇರೂರಿರುತ್ತವೆ ಎಂಬುದನ್ನು ನೆನಪಿಸುತ್ತದೆ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th AUGUST 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-08-2025



## 127 ವರ್ಷಗಳ ನಂತರ ಭಾರತಕ್ಕೆ ಮರಳಿದ ಭಗವಾನ್ ಗೌತಮ ಬುದ್ಧನ ಪವಿತ್ರ ಪಿಪ್ರಾಹ್ವಾ ಅವಶೇಷ



127 ವರ್ಷಗಳ ನಂತರ ಭಗವಾನ್ ಗೌತಮ ಬುದ್ಧನ ಪವಿತ್ರ ಪಿಪ್ರಾಹ್ವಾ (ಉತ್ತರಪ್ರದೇಶದ ಹಳ್ಳಿ) ಅವಶೇಷಗಳು ಭಾರತಕ್ಕೆ ಮರಳಿರುವುದನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ವಿಕಾಸ್ ಭಿ ವಿರಾಸತ್ ಭಿ ಅವರ ಮನೋಭಾವವನ್ನು ಪ್ರತಿಬಿಂಬಿಸುವ ಹೇಳಿಕೆಯಲ್ಲಿ, ಪ್ರಧಾನ ಮಂತ್ರಿಯವರು ಭಗವಾನ್ ಬುದ್ಧನ ಬೋಧನೆಗಳ ಬಗ್ಗೆ ಭಾರತ ಹೊಂದಿರುವ ಆಳವಾದ ಗೌರವ ಮತ್ತು ಅದರ ಆಧ್ಯಾತ್ಮಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸುವ ರಾಷ್ಟ್ರದ ಅಚಲ ಬದ್ಧತೆಯನ್ನು ಒತ್ತಿ ಹೇಳಿದರು. ರಾಷ್ಟ್ರದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಇದು ಹೆಮ್ಮೆಯ ಮತ್ತು ಸಂತೋಷದಾಯಕ ಕ್ಷಣ. ಪಿಪ್ರಾಹ್ವಾ ಅವಶೇಷಗಳನ್ನು 1898ರಲ್ಲಿ ಕಂಡುಹಿಡಿಯಲಾಯಿತು. ಆದರೆ ವಸಾಹತುಶಾಹಿ ಅವಧಿಯಲ್ಲಿ ಭಾರತದಿಂದ ತೆಗೆದುಕೊಂಡು ಹೋಗಲಾಗಿತ್ತು. ಈ ವರ್ಷದ ಆರಂಭದಲ್ಲಿ ಅಂತರರಾಷ್ಟ್ರೀಯ ಹರಾಜಿನಲ್ಲಿ ಅವಶೇಷಗಳು ಕಾಣಿಸಿಕೊಂಡಾಗ, ಅವುಗಳ ಮರಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ತ್ವರಿತ ಕ್ರಮ ಕೈಗೊಂಡಿತು ಎಂದು ಅವರು ಹೇಳಿದರು. ಈ ಮಹತ್ವದ ಪ್ರಯತ್ನಕ್ಕೆ ಕೊಡುಗೆ ನೀಡಿದ ಪ್ರತಿಯೊಬ್ಬರನ್ನು ಸಹ ಅವರು ಶ್ಲಾಘಿಸಿದರು.

## ಸಂಚಾರ್ ಸಾಥಿ ಉಪಕ್ರಮದಿಂದಾಗಿ 1.36 ಕೋಟಿ ನಕಲಿ ಮೊಬೈಲ್ ಸಂಪರ್ಕಗಳು ಪತ್ತೆ

ಸಂಚಾರ್ ಸಾಥಿ ಉಪಕ್ರಮದ ಸಹಾಯದಿಂದ 1.36 ಕೋಟಿ ನಕಲಿ ಮೊಬೈಲ್ ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ಸಂಚಾರ್ ಸಾಥಿ ಪೋರ್ಟಲ್‌ನಲ್ಲಿ 35 ಲಕ್ಷಕ್ಕೂ ಹೆಚ್ಚು ಜನರು ಮೊಬೈಲ್ ಕಳ್ಳತನದ ದೂರುಗಳನ್ನು ದಾಖಲಿಸಿದ್ದಾರೆ ಎಂದು ಮಾಹಿತಿ ನೀಡಿದರು. ಅವುಗಳಲ್ಲಿ 21 ಲಕ್ಷಕ್ಕೂ ಹೆಚ್ಚು ಕದ್ದ ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದೆ ಮತ್ತು ಐದು ಲಕ್ಷಕ್ಕೂ ಹೆಚ್ಚು ಮೊಬೈಲ್ ಫೋನ್‌ಗಳನ್ನು ಮಾಲೀಕರಿಗೆ ಹಿಂತಿರುಗಿಸಲಾಗಿದೆ ಎಂದು ಅವರು ಹೇಳಿದರು. ಸೈಬರ್ ಅಪರಾಧ ಮತ್ತು ಆರ್ಥಿಕ ವಂಚನೆಗಳನ್ನು ತಡೆಗಟ್ಟಲು ಟೆಲಿಕಾಂ ಸಂಪನ್ಮೂಲಗಳ ದುರುಪಯೋಗಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಾಲುದಾರರೊಂದಿಗೆ ಹಂಚಿಕೊಳ್ಳಲು ಡಿಜಿಟಲ್ ಇಂಟೆಲಿಜೆನ್ಸ್ ಪ್ಲಾಟ್‌ಫಾರ್ಮ್ ಅನ್ನು ಪ್ರಾರಂಭಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸರು, ಭದ್ರತಾ ಸಂಸ್ಥೆಗಳು ಮತ್ತು ಟೆಲಿಕಾಂ ಸೇವಾ ಪೂರೈಕೆದಾರರು ಸೇರಿದಂತೆ 620 ಸಂಸ್ಥೆಗಳು ಈ ವೇದಿಕೆಯೊಂದಿಗೆ ಸಂಯೋಜಿಸಲ್ಪಟ್ಟಿವೆ ಎಂದು ಅವರು ಹೇಳಿದರು.

## ಬೃಹತ್ ಉದ್ಯಮ ಸಾಮ್ರಾಜ್ಯವನ್ನು ತ್ಯಜಿಸಿ ಶಿವಭಕ್ತನಾದ ಜಪಾನ್‌ನ ಉದ್ಯಮಿ

41 ವರ್ಷದ ಜಪಾನೀ ಉದ್ಯಮಿಯೊಬ್ಬರು ತಮ್ಮ ಬೃಹತ್ ಉದ್ಯಮ ಸಾಮ್ರಾಜ್ಯವನ್ನು ತ್ಯಜಿಸಿ ಭಾರತಕ್ಕೆ ಆಗಮಿಸಿ ಆಧ್ಯಾತ್ಮಿಕ ಜೀವನಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹೋಶಿ ತಕಾಯುಕಿ ಎಂಬ ಹೆಸರಿನ ಉದ್ಯಮಿ ಈಗ ಬಾಲಕುಂಭ ಗುರುಮುನಿ ಎಂದು ತಮ್ಮ ಹೆಸರನ್ನು ಬದಲಾಯಿಸಿಕೊಂಡಿದ್ದು ಶಿವಭಕ್ತಿಗೆ ಸಮರ್ಪಿಸಿಕೊಂಡಿದ್ದಾರೆ. ಒಂದು ಕಾಲದಲ್ಲಿ ಟೋಕಿಯೊದಲ್ಲಿ ಯಶಸ್ವಿ ಸೌಂದರ್ಯ ಉತ್ಪನ್ನಗಳ ಉದ್ಯಮಿಯಾಗಿದ್ದ ಇವರು, ಇಂದು ಕಾವಿಬಟ್ಟೆ ಧರಿಸಿ, ಉತ್ತರಾಖಂಡದಲ್ಲಿ ಬರಿಗಾಲಲ್ಲಿ ಯಾತ್ರೆ ಮಾಡುತ್ತಾ ಶಿವ ಭಕ್ತರಾಗಿದ್ದಾರೆ. 20 ಜಪಾನೀ ಅನುಯಾಯಿಗಳೊಂದಿಗೆ, ತಕಾಯುಕಿಯವರು ಇತ್ತೀಚೆಗೆ ಕನ್ವರ್‌ಯಾತ್ರೆಯಲ್ಲಿ ಭಾಗವಹಿಸಿ ಪವಿತ್ರ ಗಂಗಾ ಜಲವನ್ನು ಹೊತ್ತುಕೊಂಡು ಸಾಗಿದ್ದಾರೆ. ಅವರು ಡೆಹರಾಡೂನ್‌ನಲ್ಲಿ ಸಹ ಕನ್ವರಿಯರಿಗಾಗಿ ಎರಡು ದಿನಗಳ ಆಹಾರ ಶಿಬಿರವನ್ನು ಆಯೋಜಿಸಿದ್ದರು. ಆಧ್ಯಾತ್ಮಿಕ ಸೇವೆಯ ಭಾಗವಾಗಿ ಊಟವನ್ನು ನೀಡಿದ್ದರು. ವರದಿಯ ಪ್ರಕಾರ, ತಕಾಯುಕಿಯವರ ಆಧ್ಯಾತ್ಮಿಕ ಯಾತ್ರೆ ಸುಮಾರು 20 ವರ್ಷಗಳ ಹಿಂದೆ ತಮಿಳುನಾಡಿಗೆ



ಭೇಟಿ ನೀಡಿದಾಗ ಪ್ರಾರಂಭವಾಗಿದ್ದು, ಅಲ್ಲಿ ಅವರು ಜ್ಯೋತಿಷಿಯೊಬ್ಬರನ್ನು ಭೇಟಿಯಾಗಿ ಅವರಿಂದ ಪ್ರೇರಣೆ ಪಡೆದು ಬಳಿಕ ಹಿಂದೂ ಆಧ್ಯಾತ್ಮಿಕತೆಯಲ್ಲಿ ಬೇರೂರಿರುವ ಮಾರ್ಗವನ್ನು ಅನುಸರಿಸಲು ನಿರ್ಧರಿಸಿದ್ದಾರೆ. ಅವರು ತಮ್ಮ ಟೋಕಿಯೊ ಮನೆಯನ್ನು ಶಿವ ದೇವಾಲಯವಾಗಿ ಪರಿವರ್ತಿಸಿದ್ದಾರೆ. ಮತ್ತೊಂದು ದೇವಾಲಯವನ್ನು ಕೂಡ ಅವರು ನಿರ್ಮಿಸಿದ್ದಾರೆ ಎನ್ನಲಾಗಿದೆ. ಜುಲೈನಲ್ಲಿ, ಅವರು ಕನ್ವರ್ ಯಾತ್ರೆಯಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸಿದ್ದಾರೆ. ಉತ್ತರಾಖಂಡದಲ್ಲಿ ಒಂದು ಆಶ್ರಮವನ್ನು ಸಹ ನಿರ್ಮಿಸಲು ಯೋಜಿಸಲಾಗಿದೆ.

## ಸೈನಿಕರ ಕುಟುಂಬಗಳಿಗೆ ಕಾನೂನು ನೆರವು ಯೋಜನೆ ಆರಂಭ

ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ, ಸೈನಿಕರ ಕುಟುಂಬಗಳಿಗೆ ಕಾನೂನು ನೆರವು ನೀಡಲಾಗುತ್ತಿದೆ. NALSA ವೀರ್ ಪರಿವಾರ್ ಸಹಾಯತ ಯೋಜನೆ 2025 ಎಂಬ ಹೊಸ ಉಪಕ್ರಮವನ್ನು ಆರಂಭಿಸಲಾಗಿದ್ದು, ಇದು ಕಠಿಣ ಭೂಪ್ರದೇಶಗಳು ಮತ್ತು ದೂರದ




ಪ್ರದೇಶಗಳಲ್ಲಿ ಸೇವೆ ಸಲ್ಲಿಸುವಾಗ ಭಾರತೀಯ ಸೈನಿಕರನ್ನು ದೇಶೀಯ ಕಾನೂನು ಹೊರೆಗಳಿಂದ ಮುಕ್ತಗೊಳಿಸುವ ಗುರಿಯನ್ನು ಹೊಂದಿದೆ. "ನೀವು ಗಡಿಯಲ್ಲಿ ದೇಶಕ್ಕೆ ಸೇವೆ ಸಲ್ಲಿಸುತ್ತೀರಿ, ನಾವು ನಿಮ್ಮ ಕುಟುಂಬವನ್ನು ಮನೆಯಲ್ಲಿಯೇ ನೋಡಿಕೊಳ್ಳುತ್ತೇವೆ" ಎಂಬ ಘೋಷವಾಕ್ಯದಡಿ ಈ ಯೋಜನೆ ತರಲಾಗಿದೆ. ಈ ಯೋಜನೆಯನ್ನು ಶ್ರೀನಗರದಲ್ಲಿ ನಡೆದ ಸಮ್ಮೇಳನದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (NALSA) ಕಾರ್ಯನಿರ್ವಾಹಕ ಅಧ್ಯಕ್ಷ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಔಪಚಾರಿಕವಾಗಿ ಉದ್ಘಾಟಿಸಿದರು. ಆಪರೇಷನ್ ಸಿಂದೂರ್ ಕಾರ್ಯಾಚರಣೆಯ ಸಮಯದಲ್ಲಿ ಸಶಸ್ತ್ರ ಪಡೆಗಳು ಮಾಡಿದ ತ್ಯಾಗಗಳಿಂದ ಪ್ರಭಾವಿತಗೊಂಡು ಈ ಯೋಜನೆಯನ್ನು ತರಲಾಗಿದೆ. ಮೂಲಗಳ ಪ್ರಕಾರ, ದೇಶವನ್ನು ರಕ್ಷಿಸುವ ಸೈನಿಕರು ವೈಯಕ್ತಿಕ ಕಾನೂನು ಬಿಕ್ಕಟ್ಟುಗಳನ್ನು ನಿಭಾಯಿಸುವಲ್ಲಿ ಏಕಾಂಗಿಯಾಗಬಾರದು ಎಂಬ ಕಾರಣಕ್ಕೆ ಕಾನೂನು ಸಮುದಾಯವು ತನ್ನ ಪಾತ್ರವನ್ನು ನಿರ್ವಹಿಸಬೇಕು ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ.

## 'ಡ್ರೋನ್ ಉಡಾವಣಾ ನಿಖರ ನಿರ್ದೇಶಿತ ಕ್ಷಿಪಣಿ'ಯನ್ನು ಯಶಸ್ವಿಯಾಗಿ ಪರೀಕ್ಷಿಸಿದ ಡಿಆರ್‌ಡಿಓ

ಆಂಧ್ರಪ್ರದೇಶದ ಪರೀಕ್ಷಾ ವ್ಯಾಪ್ತಿಯಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು 'ಡ್ರೋನ್-ಉಡಾವಣಾ ನಿಖರ-ನಿರ್ದೇಶಿತ ಕ್ಷಿಪಣಿ'ಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಕರ್ನೂಲ್‌ನಲ್ಲಿ ಹಾರಾಟದ ಪ್ರಯೋಗಗಳನ್ನು ನಡೆಸಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. "ಭಾರತದ ರಕ್ಷಣಾ ಸಾಮರ್ಥ್ಯಗಳಿಗೆ ಪ್ರಮುಖ ಉತ್ತೇಜನವಾಗಿ, ಆಂಧ್ರಪ್ರದೇಶದ ಕರ್ನೂಲ್‌ನಲ್ಲಿರುವ ಪರೀಕ್ಷಾ ಶ್ರೇಣಿಯಾದ ರಾಷ್ಟ್ರೀಯ ಮುಕ್ತ ಪ್ರದೇಶ ಶ್ರೇಣಿಯಲ್ಲಿ DRDO ಮಾನವರಹಿತ ವೈಮಾನಿಕ ವಾಹನ (UAV) ಉಡಾವಣಾ ನಿಖರ-ನಿರ್ದೇಶಿತ ಕ್ಷಿಪಣಿ (ULPGM)-V3 ಹಾರಾಟದ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದೆ" ಎಂದು ರಕ್ಷಣಾ ಸಚಿವರ ಪೋಸ್ಟ್ ಹೇಳಿದೆ. ರಕ್ಷಣಾ ಬಂಡವಾಳ ಸಂಗ್ರಹಣೆ ಪಾಲುದಾರರು (DcPPಗಳು), ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSMEಗಳು) ಮತ್ತು ನವೋದ್ಯಮಗಳು ಸೇರಿದಂತೆ ಉದ್ಯಮ ಪಾಲುದಾರರ ಸಹಯೋಗದೊಂದಿಗೆ ಕ್ಷಿಪಣಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. DRDO ಮತ್ತು ಅದರ ಪಾಲುದಾರರನ್ನು ಅಭಿನಂದಿಸುತ್ತಾ, "ಈ ಯಶಸ್ಸು ಭಾರತೀಯ ಉದ್ಯಮವು ಈಗ ನಿರ್ಣಾಯಕ ರಕ್ಷಣಾ ತಂತ್ರಜ್ಞಾನಗಳನ್ನು ಹೀರಿಕೊಳ್ಳಲು ಮತ್ತು ಉತ್ಪಾದಿಸಲು ಸಿದ್ಧವಾಗಿದೆ ಎಂದು ಸಾಬೀತುಪಡಿಸುತ್ತದೆ" ಎಂದು ಅವರು ಹೇಳಿದರು. DRDO ವಿನ್ಯಾಸಗೊಳಿಸಿದ, ಅಭಿವೃದ್ಧಿಪಡಿಸಿದ ಮತ್ತು ಪರೀಕ್ಷಿಸಿದ ULPGM-V3, ಇದನ್ನು ULM-ER (ವಿಸ್ತೃತ-ಶ್ರೇಣಿಯ ರೂಪಾಂತರ) ಎಂದೂ ಕರೆಯಲಾಗುತ್ತದೆ, ಇದು DRDOದ UAV-ಉಡಾವಣಾ ನಿಖರ ಯುದ್ಧಸಾಮಗ್ರಿಯ ಮುಂದುವರಿದ ಆವೃತ್ತಿಯಾಗಿದೆ ಮತ್ತು ಇಮೇಜಿಂಗ್ ಇನ್ಫ್ರಾರೆಡ್(IR) ಸೀಕರ್ ಅನ್ನು ಬಳಸಿಕೊಂಡು ನಿಷ್ಕ್ರಿಯ ಹೋಮಿಂಗ್‌ಅನ್ನು ಒಳಗೊಂಡಿದೆ, ಇದು ಹಗಲು ಮತ್ತು ರಾತ್ರಿ ಎರಡೂ ಪರಿಸ್ಥಿತಿಗಳಲ್ಲಿ ನಿಖರವಾದ ತೊಡಗಿಸಿಕೊಳ್ಳುವಿಕೆಗೆ ಅನುವು ಮಾಡಿಕೊಡುತ್ತದೆ.

## ಮಾಲೆಗಾಂವ್ ಸ್ಫೋಟ ಪ್ರಕರಣ: ಸಾಧ್ವಿ ಪ್ರಜ್ಞಾ ಸಿಂಗ್ ಸೇರಿ ಎಲ್ಲಾ ಆರೋಪಿಗಳು ಖುಲಾಸೆ

ಮುಂಬೈನ ವಿಶೇಷ ನ್ಯಾಯಾಲಯವು 2008ರ ಮಾಲೆಗಾಂವ್ ಸ್ಫೋಟ ಪ್ರಕರಣದ ತೀರ್ಪನ್ನು ಪ್ರಕಟಿಸಿದೆ. ರಂಜಾನ್ ತಿಂಗಳಲ್ಲಿ ಮುಂಬೈನ ಮಾಲೆಗಾಂವ್‌ನ ಮುಸ್ಲಿಂ ಪ್ರಾಬಲ್ಯದ ಪ್ರದೇಶದಲ್ಲಿ ದಾಳಿ ನಡೆದು ಸುಮಾರು 17 ವರ್ಷಗಳ ನಂತರ ಈ ತೀರ್ಪು ಬಂದಿದೆ. ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಮತ್ತು ನಿವೃತ್ತ ಮೇಜರ್ ರಮೇಶ್ ಉಪಾಧ್ಯಾಯ ಸೇರಿದಂತೆ ಈ ಪ್ರಕರಣದಲ್ಲಿ ಎನ್‌ಐಎ ಹೆಸರಿಸಿರುವ ಏಳು ಆರೋಪಿಗಳು ನಿರಾಪರಾಧಿಗಳು ಎಂದು ಕೋರ್ಟ್ ತೀರ್ಪು ನೀಡಿದೆ. ಮಾಲೆಗಾಂವ್ ಸ್ಫೋಟ ಪ್ರಕರಣವು ಮೊದಲು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದಲ್ಲಿತ್ತು. ಆದಾಗ್ಯೂ, 2011ರಲ್ಲಿ, ರಾಷ್ಟ್ರೀಯ ತನಿಖಾ ಸಂಸ್ಥೆ ಈ ಪ್ರಕರಣವನ್ನು ವಹಿಸಿಕೊಂಡಿತು ಮತ್ತು ಈಗ ತನ್ನ ತೀರ್ಪು ಪ್ರಕಟಗೊಂಡಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.